# ಮಾನ್ವಿತಾ ಕಣ್ಣಲಿ ಕೋಲ್ಮಿಂಚು ಕಾಣಿಸಿತಾ..

ಮಾನ್ವಿತಾ ಮದ್ವೆ ಆಗ್ಬಿಟ್ರಾ? ಇಂಥದ್ದೊಂದು ಪ್ರಶ್ನೆ ಇತ್ತೀಚೆಗೆ ಗಾಂಧಿನಗರದ ಗಲ್ಲಿಗಳಲ್ಲಿ ಗಿರಕಿ ಹೊಡೆದಿತ್ತು. ಕಾರಣ ಇಷ್ಟೆ; ಮಾನ್ವಿತಾ ಹರೀಶ್ ಅಂತಿದ್ದ ಹೆಸರು ಮಾನ್ವಿತಾ ಕಾಮತ್ ಎಂದು ಬದಲಾಗಿತ್ತು. 'ಮದ್ವೆ ಗಿದ್ವೆ ಏನಿಲ್ಲ, ಹರೀಶ್ ತಂದೆ ಹೆಸರು, ಕಾಮತ್ ಮನೆತನದ ಹೆಸರು. ದಾಖಲೆಗಳಲ್ಲಿ ನನ್ನ ಸರ್ ನೇಮ್ ಕಾಮತ್ ಅಂತಲೇ ಇದೆ. ಅದನ್ನೇ ಹಾಕಿಕೊಂಡಿದ್ದೇನಷ್ಟೆ' ಎಂದು ನಗುತ್ತಲೇ ಉತ್ತರಿಸಿ ಅವರ ಯುವ ಅಭಿಮಾನಿಗಳ ಉಸಿರಾಟವನ್ನು ಸರಾಗಗೊಳಿಸಿದ್ದರು.

ಈಗಲೂ ಜನರು ಮಾನ್ವಿತಾ ಅವರನ್ನು ನೆನಪಿಸಿಕೊಳ್ಳುವುದು ಸೂರಿ ನಿರ್ದೇಶನದ 'ಕೆಂಡಸಂಪಿಗೆ' ಸಿನಿಮಾದ ದಿಟ್ಟ ಹುಡುಗಿ ಗೌರಿ ಪಾತ್ರದ ಮೂಲಕವೇ. ಆ ಚಿತ್ರದ ನಂತರ 'ಚೌಕ' ಮತ್ತು 'ಕನಕ' ಎಂಬೆರಡು ಚಿತ್ರಗಳಲ್ಲಿ ನಟಿಸಿದರು. ಆದರೆ 'ಕೆಂಡಸಂಪಿಗೆ'ಯ ಪಾತ್ರದ ಛಾಯೆಯನ್ನು ಮರೆಸಿ ಹೊಸ ಛಾಪು ನೀಡಲು ಮತ್ತೆ ಸೂರಿಯೇ ಬರಬೇಕಾಯ್ತು. ಶಿವರಾಜ್ ಕುಮಾರ್ ಜತೆಗೆ ನಟಿಸಿದ 'ಟಗರು' ಚಿತ್ರದಲ್ಲಿನ ಪುನರ್ವಸು ಪಾತ್ರ ಅವರನ್ನು ವೃತ್ತಿಜೀವನದ ಹೊಸ ಎತ್ತರಕ್ಕೆ ಕೊಂಡೊಯ್ದಿದೆ. ಮಾದಕ ಪದಾರ್ಥಗಳ ದುಶ್ಚಟಕ್ಕೆ ಬಲಿಯಾದ ಕಾಲೇಜು ಹುಡುಗಿಯ ಪಾತ್ರದಲ್ಲಿನ ಅವರ ಅಭಿನಯಕ್ಕೆ ಖ್ಯಾತ ನಿರ್ದೇಶಕ ರಾಮ್ ಗೋಪಾಲ್ ವರ್ಮ ಅವರೂ ತಲೆದೂಗಿದ್ದರು. ಅಷ್ಟೇ ಅಲ್ಲ, ತಮ್ಮ ಚಿತ್ರದಲ್ಲಿ ಅವಕಾಶ ಕೊಡುವುದಾಗಿಯೂ ಭರವಸೆ ನೀಡಿದ್ದರು.

ಮಾನ್ವಿತಾ ತಮ್ಮ ವೃತ್ತಿಜೀವನ ಆರಂಭಿಸಿದ್ದು ರೇಡಿಯೊ ಜಾಕಿ ಆಗಿ. ನಟನೆಯ ನಂಟು ಅಂಟಿಸಿಕೊಂಡ ನಂತರ ಆ ವೃತ್ತಿಗೆ ತಿಲಾಂಜಲಿ ನೀಡಿದರೂ ಚಟಪಟ ಮಾತಿನ ಮೂಲಗುಣವನ್ನು ಮಾತ್ರ ಹಾಗೆಯೇ ಉಳಿಸಿಕೊಂಡಿದ್ದಾರೆ. ಚಿತ್ರರಂಗಕ್ಕೆ ಬಂದು ನಾಲ್ಕು ವರ್ಷಗಳಲ್ಲಿ ಬಿಡುಗಡೆಯಾದ ಚಿತ್ರಗಳು ಮೂರು ಮಾತ್ರ. ಆದರೆ ಈಗ ಕೈಯಲ್ಲಿರುವ ಸಿನಿಮಾಗಳ ಬಗ್ಗೆ ಅವರಿಗೆ ಹೆಚ್ಚು ನಿರೀಕ್ಷೆಗಳಿವೆ. ಅವರು ನಾಯಕಿಯಾಗಿ ನಟಿಸಿರುವ 'ತಾರಕಾಸುರ' ಬಿಡುಗಡೆಗೆ ಸಜ್ಜಾಗಿದೆ. ಇನ್ನೊಂದು ಸಿನಿಮಾ 'ರಿಲ್ಯಾಕ್ಸ್ ಸತ್ಯ' ಕೂಡ ಪೂರ್ಣಗೊಂಡಿದೆ. ಇದರಲ್ಲಿನ ಭಿನ್ನ ಪಾತ್ರಗಳು ತನ್ನ ವೃತ್ತಿಜೀವನವನ್ನು ಇನ್ನಷ್ಟು ಸಮೃದ್ಧಗೊಳಿಸುವುದಷ್ಟೇ ಅಲ್ಲ; ಅವಕಾಶಗಳನ್ನು ದೊರಕಿಸಿಕೊಡಲಿದೆ ಎಂಬ ನಂಬಿಕೆ ಅವರಿಗಿದೆ.

ಸದ್ಯ ಅವರು ನಾಗತಿಹಳ್ಳಿ ಚಂದ್ರಶೇಖರ್ ಅವರ ಹೊಸ ಸಿನಿಮಾದ ಚಿತ್ರೀಕರಣದಲ್ಲಿ ಬಿಜಿಯಾಗಿದ್ದಾರೆ. ಮೇಷ್ಟ್ರ ಜತೆಗೆ ಕೆಲಸ ಮಾಡಿದ ಅನುಭವ ಹೇಗಿದೆ ಎಂದು ಕೇಳಿದರೆ 'ಮತ್ತೆ ತಿರುಗಿ ಶಾಲೆಗೆ ಹೋಗಿ ಕೂತ ಹಾಗಿದೆ' ಎಂದು ತುಂಟ ವಿದ್ಯಾರ್ಥಿಯಂತೆ ನಗುತ್ತಾರೆ ಮಾನ್ವಿತಾ.

ಕನ್ನಡದಲ್ಲಿ ಇನ್ನೂ ಕೆಲವು ಕಥೆಗಳನ್ನು ಕೇಳಿರುವ ಅವರ ತಮ್ಮ ಅಭಿಯನಪ್ರತಿಭೆಯನ್ನು ಸಾಣೆಗೊಡ್ಡಬಲ್ಲಂಥ ಪಾತ್ರಗಳನ್ನು ಮಾತ್ರ ಒಪ್ಪಿಕೊಳ್ಳುವ ನಿರ್ಧಾರವನ್ನೂ ಮಾಡಿದ್ದಾರಂತೆ. ಇಂಥ ಅವಕಾಶಗಳು ಬೇರೆ ಭಾಷೆಗಳಿಂದ ಬಂದರೆ ಅವನ್ನೂ ಒಪ್ಪಿಕೊಳ್ಳಲೂ ಸಿದ್ಧ ಎನ್ನುವ ಮಾನ್ವಿತಾ ಸದ್ಯವೇ ಬೇರೆ ಭಾಷೆಯ ಚಿತ್ರವೊಂದರಲ್ಲಿ ನಟಿಸುವ ಸೂಚನೆ ನೀಡುತ್ತಾರೆ.

ಇತ್ತೀಚೆಗಷ್ಟೇ ಮುಂಬೈಗೆ ತೆರಳಿ ರಾಮ್ ಗೋಪಾಲ್ ವರ್ಮ ಅವರನ್ನು ಭೇಟಿ ಮಾಡಿ ಬಂದಿರುವ ಅವರು ಬಣ್ಣದ ಬಯಲಿನಲ್ಲಿ ಹೊಸ ದಿಗಂತವನ್ನು ಮುಟ್ಟುವ ಉಮೇದಿನಲ್ಲಿದ್ದಾರೆ. ■

ತುಂಟತನ ಹಾಗೂ ದಿಟ್ಟತನ ಎರಡನ್ನೂ ಅಭಿವ್ಯಕ್ತಿಸುವ ಪಾತ್ರಗಳ ಮೂಲಕ ಜನಪ್ರಿಯರಾಗಿರುವ ಮಾನ್ವಿತಾ, ತಮ್ಮ ಮುಂದಿನ ಸಿನಿಮಾಗಳ ಬಗ್ಗೆ ಹೆಚ್ಚು ನಿರೀಕ್ಷೆ ಹೊಂದಿದ್ದಾರೆ.

■ ಪದ್ಮನಾಭ ಭಟ್

